## ನಿಮ್ಮೊಡನೆ

# ರಾತ್ರಿಪಾಳಿಗಳಲ್ಲಿ ಮಹಿಳೆಯರು, ಸುರಕ್ಷತಾ ಕ್ರಮದ ಕಣ್ಗಾವಲು ಅಗತ್ಯ

ಕೈಗಾರಿಕಾ ವಲಯದಲ್ಲಿ ಮಹಿಳೆಯರು ರಾತ್ರಿಪಾಳಿಗಳಲ್ಲಿ ಕಾರ್ಯ ನಿರ್ವಹಿಸಲು ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿರುವುದು ಸ್ವಾಗತಾರ್ಹ. ಇನ್ನು ಮುಂದೆ ಕೇಂದ್ರ ಕೈಗಾರಿಕಾ ಕಾಯ್ದೆಯಡಿ ನೋಂದಣಿಯಾದ ರಾಜ್ಯದಲ್ಲಿನ ಎಲ್ಲ ಕೈಗಾರಿಕೆಗಳು ಮಹಿಳೆಯರಿಗೆ ರಾತ್ರಿಪಾಳಿಯಲ್ಲಿ ದುಡಿಯಲು ಅವಕಾಶ ಕಲ್ಪಿಸಬೇಕಾಗಿದೆ. ಇದರಿಂದಾಗಿ ಸಮಯದ ವ್ಯತ್ಯಾಸವಿಲ್ಲದೆ ಕಾರ್ಯ ನಿರ್ವಹಿಸಲು ಇಚ್ಛಿಸುವ ಹೆಣ್ಣುಮಕ್ಕಳಿಗೆ ಅವಕಾಶ ದೊರೆಯಲಿದೆ ಹಾಗೂ ಸ್ತ್ರೀ–ಪುರುಷ ಸಮಾನತೆಯ ದೃಷ್ಟಿಯಿಂದಲೂ ಈ ಕ್ರಮ ಅಗತ್ಯವಾದುದು. ಈವರೆಗೆ ಕೈಗಾರಿಕೆಗಳಲ್ಲಿನ ರಾತ್ರಿಪಾಳಿ ಪುರುಷರಿಗೆ ಮಾತ್ರ ಸೀಮಿತವಾಗಿತ್ತು. ಈಗ ರಾತ್ರಿ 7ರಿಂದ ಬೆಳಿಗ್ಗೆ 7ರವರೆಗಿನ ಅವಧಿಯಲ್ಲಿ ಮಹಿಳೆಯರೂ ಕೆಲಸ ಮಾಡಬಹುದೆಂದು ಇಲಾಖೆ ಅಧಿಸೂಚನೆ ಹೊರಡಿಸಿದೆ. ಆದರೆ, ಮಹಿಳಾ ಉದ್ಯೋಗಿಗಳ ಲಿಖಿತ ಒಪ್ಪಿಗೆಯ ಮೇರೆಗಷ್ಟೇ ಅವರನ್ನು ರಾತ್ರಿ ಹೊತ್ತು ಕೆಲಸಕ್ಕೆ ನಿಯೋಜಿಸಬಹುದೇ ಹೊರತು, ಬಲವಂತವಾಗಿ ಅಥವಾ ಕಡ್ಡಾಯವಾಗಿ ಕೆಲಸ ಮಾಡಿಸುವಂತಿಲ್ಲ ಎಂದು ಇಲಾಖೆ ಸ್ಪಷ್ಟಪಡಿಸಿದೆ.

ಮಹಿಳೆಯರಿಗೆ ರಾತ್ರಿಪಾಳಿಗಳಲ್ಲಿ ಅವಕಾಶ ಕಲ್ಪಿಸಬೇಕೆನ್ನುವ ಒತ್ತಾಯ ಕಳೆದ ಕೆಲವು ವರ್ಷಗಳಿಂದ ದೇಶದ ವಿವಿಧ ಭಾಗಗಳಲ್ಲಿ ಕೇಳಿಬರುತ್ತಿತ್ತು. 1948ರ ಕೇಂದ್ರ ಕೈಗಾರಿಕಾ ಕಾಯ್ದೆ ಬೆಳಿಗ್ಗೆ 6ರಿಂದ ಸಂಜೆ 7ರವರೆಗಷ್ಟೇ ಮಹಿಳೆಯರು ಕೆಲಸ ಮಾಡಲು ಅವಕಾಶ ಕಲ್ಪಿಸಿತ್ತು. ಈ ಕಾಯ್ದೆ ಲಿಂಗತಾರತಮ್ಯಕ್ಕೆ ಅವಕಾಶ ಕಲ್ಪಿಸುತ್ತದೆ ಎನ್ನುವ ವಾದವನ್ನು ಪುರಸ್ಕರಿಸಿದ ಅಲಹಾಬಾದ್ ಹೈಕೋರ್ಟ್, ದುಡಿಮೆಯಲ್ಲಿ ಲಿಂಗತಾರತಮ್ಯ ಮಾಡುವುದು ಸಂವಿಧಾನ ಮಹಿಳೆಯರಿಗೆ ನೀಡಿರುವ ಹಕ್ಕಿನ ಉಲ್ಲಂಘನೆ ಎಂದು ಅಭಿಪ್ರಾಯಪಟ್ಟಿತ್ತು. ಆ ವಿಶ್ಲೇಷಣೆ, ದೇಶದ ವಿವಿಧ ಭಾಗಗಳಲ್ಲಿ ಮಹಿಳೆಯರು ಕೈಗಾರಿಕೆಗಳಲ್ಲಿ ರಾತ್ರಿಯ ಹೊತ್ತು ದುಡಿಯಲು ಅವಕಾಶ ಕಲ್ಪಿಸುವ ಪ್ರಯತ್ನಗಳಿಗೆ ಚಾಲನೆ ನೀಡಿದೆ.

> ಋತುಚಕ್ರ ಹಾಗೂ ಮಾತೃತ್ವಗಳು ಮಹಿಳೆಯರ ದೈಹಿಕ–ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಬಹುಪಾಲು ಕೌಟುಂಬಿಕ ಹೊಣೆಗಾರಿಕೆಗೆ ಹೆಣ್ಣೇ ಹೆಗಲು ನೀಡಬೇಕಾಗಿದೆ. ಇವೆಲ್ಲ ಪ್ರತಿಕೂಲ ಸಂಗತಿಗಳ ನಡುವೆಯೂ ಗಂಡಿಗೆ ಸರಿಸಮವಾಗಿ ಅಥವಾ ಇನ್ನೂ ಹೆಚ್ಚು ಸಮರ್ಥವಾಗಿ ತನ್ನ ದುಡಿಯುವ ಸಾಮರ್ಥ್ಯವನ್ನು ಮಹಿಳೆ ಸಾಬೀತುಪಡಿಸಿದ್ದಾಳೆ.

ರಾತ್ರಿ ಪಾಳಿಯಲ್ಲಿ ಮಹಿಳೆಯರು ಕೆಲಸ ಮಾಡಲು ದೊಡ್ಡ ಅಡಚಣೆಯಾಗಿರುವುದು ಅವರ ಸುರಕ್ಷತೆ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ಸಂಗತಿಗಳು. ಋತುಚಕ್ರ ಹಾಗೂ ಮಾತೃತ್ವಗಳು ಮಹಿಳೆಯರ ದೈಹಿಕ–ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಬಹುತೇಕ ಸಂದರ್ಭಗಳಲ್ಲಿ ಕೌಟುಂಬಿಕ ಹೊಣೆಗಾರಿಕೆಯ ಬಹುಪಾಲು ಹೆಣ್ಣಿನ ಮೇಲೆಯೇ ಬೀಳುತ್ತದೆ. ಇವೆಲ್ಲ ಪ್ರತಿಕೂಲ ಸಂಗತಿಗಳ ನಡುವೆಯೂ ಹೆಣ್ಣು ಗಂಡಿಗೆ ಸರಿಸಮವಾಗಿ ಅಥವಾ ಇನ್ನೂ ಹೆಚ್ಚು ಸಮರ್ಥವಾಗಿ ತನ್ನ ದುಡಿಯುವ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾಳೆ. ಆರೋಗ್ಯಕ್ಕೆ ಸಂಬಂಧಿಸಿದ ಸಂಗತಿಗಳು ಆಧುನಿಕ ಮಹಿಳೆಗಿಂದು ತೀವ್ರ ಸಮಸ್ಯೆಯಾಗಿ ಉಳಿದಿಲ್ಲ. ನಿಜವಾದ ಸಮಸ್ಯೆ ಇರುವುದು ಸುರಕ್ಷತೆಗೆ ಸಂಬಂಧಿಸಿದ ಸಂಗತಿಗಳಲ್ಲಿ. ಹಗಲಿನಲ್ಲಿಯೇ ಲೈಂಗಿಕ ದೌರ್ಜನ್ಯಗಳು ವರದಿಯಾಗುತ್ತಿರುವಾಗ, ರಾತ್ರಿ ವೇಳೆ ಹೊರಗೆ ದುಡಿಯುವ ಮಹಿಳೆಯ ಸುರಕ್ಷತೆಯ ಕುರಿತು ಸಹಜವಾಗಿಯೇ ಆತಂಕಗಳು ಹೆಚ್ಚು. ಕೆಲಸ ಮಾಡುವ ಸ್ಥಳದಿಂದ ತಡರಾತ್ರಿಯಲ್ಲಿ ಮನೆ ಸೇರುವುದು ಹೆಣ್ಣುಮಕ್ಕಳ ಪಾಲಿಗೆ ಈಗಲೂ ಅಪಾಯಕಾರಿ ಸಾಹಸ. ಈ ಆತಂಕಗಳ ನಿವಾರಣೆಯ ರೂಪದಲ್ಲಿ ಮಹಿಳಾ ಕಾರ್ಮಿಕರ ಸುರಕ್ಷತೆಗೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆ ನೀತಿನಿಯಮಗಳನ್ನು ರೂಪಿಸಿದೆ. ಇರುಳಿನಲ್ಲಿ ಕೆಲಸ ಮಾಡುವ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆ ಮತ್ತು ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಹಾಗೂ ಹೆಚ್ಚಿನ ಭದ್ರತಾ ಸಿಬ್ಬಂದಿ ನೇಮಿಸಲು ಸೂಚಿಸಿದೆ. ಒಬ್ಬರಿಗಿಂತ ಹೆಚ್ಚು ಮಹಿಳೆಯರು ರಾತ್ರಿಪಾಳಿಯಲ್ಲಿ ಇರುವಂತೆಯೂ, ಅವರಿಗೆ ಪ್ರತ್ಯೇಕ ಶೌಚಾಲಯ ಹಾಗೂ ವಿಶ್ರಾಂತಿ ಕೊಠಡಿ ಒದಗಿಸುವಂತೆಯೂ ತಿಳಿಸಿದೆ. ಕೆಲಸ ಮುಗಿಸಿದ ನಂತರ ಸುರಕ್ಷಿತವಾಗಿ ಮನೆಗೆ ತಲುಪಿಸಲು ವಾಹನ ಸೌಕರ್ಯ ಒದಗಿಸುವಂತೆ, ಹೀಗೆ ತಲುಪಿಸುವಾಗ ಹೆಣ್ಣುಮಕ್ಕಳನ್ನು ಮೊದಲು ಡ್ರಾಪ್ ಮಾಡುವಂತೆ ತಾಕೀತು ಮಾಡಲಾಗಿದೆ. ಇವೆಲ್ಲ ಕ್ರಮಗಳು ರಾತ್ರಿಪಾಳಿಯಲ್ಲಿ ಕೈಗಾರಿಕೆಗಳಲ್ಲಿ ಕಾರ್ಯ ನಿರ್ವಹಿಸಲು ಸಿದ್ಧವಾಗಿರುವ ಮಹಿಳೆಯರಲ್ಲಿ ಆತ್ಮವಿಶ್ವಾಸ ತುಂಬುವಂತಿವೆ.

ಐಟಿ ಕಂಪನಿಗಳು, ಕಾಲ್ ಸೆಂಟರ್‌ಗಳು ಸೇರಿದಂತೆ ಕೆಲವು ಉದ್ಯೋಗ ವಲಯಗಳಲ್ಲಿ ಈಗಾಗಲೇ ಮಹಿಳೆಯರು ರಾತ್ರಿ ಪಾಳಿಗಳಲ್ಲಿ ದುಡಿಯುತ್ತಿದ್ದಾರೆ. ಈಗ ಕೈಗಾರಿಕಾ ವಲಯದಲ್ಲೂ ದುಡಿಮೆಗೆ ಸಂಬಂಧಿಸಿದ ಲಿಂಗ ತಾರತಮ್ಯ ತೊಡೆದುಹಾಕಲು ಕಾರ್ಮಿಕ ಇಲಾಖೆ ಮುಂದಾಗಿದೆ. ಕೇವಲ ಅವಕಾಶ ಕಲ್ಪಿಸಿದರಷ್ಟೇ ಸಾಲದು, ಹೆಣ್ಣುಮಕ್ಕಳು ಸುರಕ್ಷಿತ ಪರಿಸರದಲ್ಲಿ ಕಾರ್ಯ ನಿರ್ವಹಿಸಲು ತಾನು ರೂಪಿಸಿರುವ ನಿಯಮಾವಳಿ ಕಟ್ಟುನಿಟ್ಟಾಗಿ ಪಾಲನೆಯಾಗುತ್ತಿದೆಯೇ ಎನ್ನುವುದರ ಬಗ್ಗೆ ಇಲಾಖೆ ಬಿಡುಗಣ್ಣಾಗಿರಬೇಕು. ಆಗಷ್ಟೇ ಕಾಗದದ ಮೇಲಿರುವ ಸಮಾನತೆ ಕಾರ್ಯರೂಪಕ್ಕೂ ಬರುವುದು ಸಾಧ್ಯ.

■ ರಘುನಾಥ ಚ.ಹ.



ಈಶ್ವರ್